**ಸಾಕ್ಷಿಯನ್ನು ಮಧ್ಯಂತರ ಅರ್ಜಿ 18 ಮತ್ತು 19 ರ ಮೇಲಿನ ಆದೇಶದಂತೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ: 16.11.2023.**

4) **ಮುಂದುವರೆದ ಮುಖ್ಯ ವಿಚಾರಣೆ - ವಾದಿ ಪರ ವಕೀಲರಿಂದ.**

5) ಸಾಕ್ಷಿಯ ಪರವಾಗಿ ಹಾಜರು ಪಡಿಸಿದ ದಾಖಲೆಗಳ ಪಟ್ಟಿಯಲ್ಲಿ ನೀಡಿರುವ ಕ್ರಮಸಂಖ್ಯೆಯಂತೆ - ದೃಢೀಕೃತ ಹಕ್ಕು ಬಿಡುಗಡೆ ಪತ್ರವನ್ನು ನಿಪಿ-9 ಎಂದು, ದೃಢೀಕೃತ ಕ್ರಯಪತ್ರಗಳನ್ನು ನಿಪಿ-10 ರಿಂದ ನಿಪಿ-12 ಎಂದು, ದೃಢೀಕೃತ ದಾನ ಪತ್ರ ನಿಪಿ-13 ಎಂದು, ದೃಢೀಕೃತ ಕ್ರಯಪತ್ರಗಳನ್ನು ನಿಪಿ-14 ಮತ್ತು ನಿಪಿ-15 ಎಂದು, ಆರ್.ಟಿ.ಸಿ. ಯನ್ನು ನಿಪಿ-16 ಎಂದು, ಕೈ ಬರಹ ಪಹಣಿಗಳನ್ನು ನಿಪಿ-17 ರಿಂದ ನಿಪಿ-22 ಎಂದು, ಪಹಣಿಗಳನ್ನು ನಿಪಿ-23 ರಿಂದ ನಿಪಿ-29 ಎಂದು ಗುರುತಿಸಲಾಯಿತು.

**ಪಾಟೀ ಸವಾಲು - 2 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರಿಂದಃ**

6) ಈ ದಾವೆಯನ್ನು ನಾನು ಪುಟ್ಟಮ್ಮ, ಮುನಿಶಾಮಪ್ಪ, ನೀಲಮ್ಮ ಮತ್ತು ಉಮೇಶ್ ಇವರ ವಿರುದ್ಧ ಸಲ್ಲಿಸಿದ್ದೇನೆ. ನಾನು ಈ ದಾವೆಯನ್ನು ಯಾವ ಪರಿಹಾರಕ್ಕಾಗಿ ಸಲ್ಲಿಸಿದ್ದೇನೆ ಎಂದರೆ ಪಾಲು ವಿಭಾಗಕ್ಕಾಗಿ ಸಲ್ಲಿಸಿದ್ದೇನೆ. ನಾನು ಪುಟ್ಟಮ್ಮ ಮತ್ತು ಮುನಿಶಾಮಪ್ಪನಿಗೆ ನೋಂದಾಯಿತ ಹಕ್ಕು ಬಿಡುಗಡೆ ಪತ್ರವನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಈ ದಿನ ನಾನು ಗುರುತಿಸಿಕೊಂಡ ನಿಪಿ-9 ನಾನು ಪುಟ್ಟಮ್ಮ ಮತ್ತು ಮುನಿಶಾಮಪ್ಪನಿಗೆ ಬರೆದುಕೊಟ್ಟಿರುವ ನೋಂದಾಯಿತ ಹಕ್ಕು ಬಿಡುಗಡೆ ಪತ್ರವಾಗಿದೆ ಎಂದರೆ ಸಾಲ ಕೊಡಿಸುತ್ತೇವೆ ಎಂದು ಹೇಳಿ ಅದನ್ನು ಬರೆಸಿಕೊಂಡಿದ್ದಾರೆ. ನಿಪಿ-9 ರಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ನಿಪಿ-9 ರಲ್ಲಿ ನಾನು ರೂ.5 ಲಕ್ಷ ಪಡೆದಿದ್ದಾಗಿ ನಮೂದಾಗಿದೆ ಎಂದರೆ ನಾನು ಯಾವುದೇ ಹಣವನ್ನು ಪಡೆದಿಲ್ಲ. 2014 ರಲ್ಲಿ ನಾನು ನನ್ನ ತಮ್ಮ ಮುನಿಶಾಮಪ್ಪನಿಗೆ

ಇನ್ನೊಂದು ನೋಂದಾಯಿತ ಹಕ್ಕು ಬಿಡುಗಡೆ ಪತ್ರವನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈಗ ತೋರಿಸಿದ ದೃಢೀಕೃತ ನೋಂದಾಯಿತ ಹಕ್ಕು ಬಿಡುಗಡೆ ಪತ್ರದ ಪುಟ 2 ರಲ್ಲಿ ಇರುವ Computerized Photograph ನನ್ನದೇ ಎಂದರೆ ಸರಿ ಎಂದಿದ್ದರಿಂದ ಆ **ದಾಖಲೆಯನ್ನು ನಿಡಿ-1 ಎಂದು ಮತ್ತು ಸಾಕ್ಷಿಯವರು ಪೋಟೋವನ್ನು ನಿಡಿ-1(ಎ) ಎಂದು ಗುರುತಿಸಿತು**. ನಿಡಿ-1 ನ್ನು ಬರೆದುಕೊಟ್ಟಿರುವ ಬಗ್ಗೆ ನನಗೆ ಗೊತ್ತಿದೆಯೇ? ಎಂದರೆ ಗೊತ್ತಿಲ್ಲ. ನನಗೆ ನಿಡಿ-1 ನ್ನು ಬರೆದುಕೊಟ್ಟ ಬಗ್ಗೆ ಗೊತ್ತಿದ್ದರೂ ಸಹ ಮುನಿಶಾಮಪ್ಪನಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಕೂಡ ನಾನು ಡಿ.ಡಿ. ಮೂಲಕ ಹಣ ಪಡೆದಿರುವುದಾಗಿ ನಮೂದಾಗಿದೆ ಎಂದರೆ ಸರಿಯಲ್ಲ. ನಿಡಿ-1 ನ್ನು ನಾನು ಯಾವ ಸರ್ವೆ ನಂಬರ್ ಜಮೀನಿನ ಕುರಿತಾಗಿ ಬರೆದುಕೊಟ್ಟಿದ್ದೇನೆಂದು ನೆನಪಿದೆಯೇ? ಎಂದರೆ ಇಲ್ಲ. ನನ್ನನ್ನು ಸಾಲ ಕೊಡಿಸುವುದಾಗಿ ಕರೆದುಕೊಂಡು ಹೋಗಿ ನನ್ನಿಂದ ಹಕ್ಕು ಬಿಡುಗಡೆ ಪತ್ರ ಬರೆಯಿಸಿಕೊಂಡಿದ್ದಾರೆ ಎಂಬುದನ್ನು ನನ್ನ ವಾದ ಪತ್ರದಲ್ಲಿ ಬರೆಯಿಸಿದ್ದೀನಾ? ಎಂದರೆ ಬರೆಯಿಸಿಲ್ಲ. ಸಾಮಾನ್ಯವಾಗಿ ಸಾಲ ಪಡೆಯುವಾಗ ಪಹಣಿಯಲ್ಲಿ ಯಾರ ಹೆಸರು ಇರುತ್ತದೆಯೋ ಅವರು ಸಹಿ ಮಾಡಿದರೇ ಮಾತ್ರ ಸಾಕಾಗುತ್ತದೆ ಎಂದರೆ ಸರಿ. ಆ ಸಮಯದಲ್ಲಿ ನನ್ನ ಹೆಸರಿನಲ್ಲಿ ಪಹಣಿ ಇರಲಿಲ್ಲ ಎಂದರೆ ಸರಿ. ಸದರಿ ದಿನಾಂಕದಂದು ನನ್ನಿಂದ ಯಾವ ಯಾವ ಸರ್ವೆ ನಂಬರುಗಳ ಬಗ್ಗೆ ಹಕ್ಕು ಬಿಡುಗಡೆ ಪತ್ರಗಳನ್ನು ಬರೆಯಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ನಿಡಿ-1 ರಂತೆ 2014 ರಲ್ಲಿ ಮುನಿಶಾಮಪ್ಪನಿಗೆ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟ ನಂತರ ಆತನು ಸರ್ವೆ ನಂ.2/1 ಮತ್ತು ಸರ್ವೆ ನಂ.13/1 ರ ಜಮೀನುಗಳ ಕ್ರಯಪತ್ರಗಳನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಮುನಿಶಾಮಪ್ಪನು ಸರ್ವೆ ನಂ.2/1 ಮತ್ತು ಸರ್ವೆ ನಂ.13/1 ರ ಜಮೀನುಗಳ ಕ್ರಯಪತ್ರಗಳನ್ನು

ಬರೆದುಕೊಟ್ಟ ನಂತರ ನಾನು ಈ ದಾವೆಯಿಂದ ಸದರಿ ಎರಡು ಆಸ್ತಿಗಳನ್ನು Delete ಮಾಡಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ.

7) ನಾನು ಹಕ್ಕು ಬಿಡುಗಡೆ ಪತ್ರವನ್ನು ಬರೆದುಕೊಟ್ಟ ನಂತರ ಮುನಿಶಾಮಪ್ಪನು 2018 ರಲ್ಲಿ 8 ಮತ್ತು 9 ನೇ ಪ್ರತಿವಾದಿಗಳಿಗೆ ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟು ಮುನಿಶಾಮಪ್ಪನಿಂದ ಹಣ ಪಡೆದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುನಿಶಾಮಪ್ಪ ಆಸ್ತಿ ಮಾರಾಟ ಮಾಡಿ ಬಂದ ಹಣದಿಂದ ಬೇರೆ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮುನಿಶಾಮಪ್ಪ ಖರೀದಿ ಮಾಡಿದ ಆಸ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲವೇ? ಎಂದರೆ ಸೇರಿಸಿದ್ದೇನೆ. ಅವರು ಯಾವ ಊರಿನಲ್ಲಿ ಯಾವ ಸರ್ವೆ ನಂಬರ್ ಜಮೀನುಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಮುನಿಶಾಮಪ್ಪನು ರಾಚೇನಹಳ್ಳಿ, ಬಾಗಲೂರು, ಮರಳಕುಂಟೆ, ಚಿಕ್ಕಬಳ್ಳಾಪುರ ಮತ್ತು ದೊಡ್ಡಬಳ್ಳಾಪುರದಲ್ಲಿ ಜಮೀನುಗಳನ್ನು ಖರೀದಿ ಮಾಡಿದ್ದಾರೆ. ಅವುಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಮುನಿಶಾಮಪ್ಪ ದೊಡ್ಡಬಳ್ಳಾಪುರ ಮತ್ತು ಚಿಕ್ಕಬಳ್ಳಾಪುರದ ಸಮೀಪದ ಗ್ರಾಮಗಳಲ್ಲಿ ಆಸ್ತಿ ಖರೀದಿ ಮಾಡಿದ್ದಾರೆ, ಆ ಊರುಗಳ ಹೆಸರುಗಳು ನನಗೆ ಗೊತ್ತಿಲ್ಲ. 2018 ರಲ್ಲಿ ಮುನಿಶಾಮಪ್ಪನು 8 ಮತ್ತು 9 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿ ಬಂದ ಹಣದಿಂದಲೇ ಮೇಲ್ಕಂಡ ಐಟಂ ನಂ.10 ರಿಂದ 16 ನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ರಾಚೇನಹಳ್ಳಿ ಗ್ರಾಮದಲ್ಲಿ ಆಸ್ತಿ ಖರೀದಿ ಮಾಡಿದಾಗ ನಾನು ಇನ್ನೂ ಚಿಕ್ಕ ಹುಡುಗಿಯಾಗಿದ್ದೆ. ಬಾಗಲೂರಿನ ಆಸ್ತಿಯನ್ನು ಯಾರು ಯಾರು ಸೇರಿ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮರಳಕುಂಟೆ ಜಮೀನನ್ನು ನನ್ನ ತಾಯಿ ಖರೀದಿ ಮಾಡಿದ್ದರು. ಮರಳಕುಂಟೆಯ ಜಮೀನಿನ ಕ್ರಯಪತ್ರವನ್ನು ನನ್ನ ತಾಯಿ ಮತ್ತು ಮುನಿಶಾಮಪ್ಪ ಜಂಟಿಯಾಗಿ ಸೇರಿ

ಮಾಡಿಕೊಂಡಿದ್ದಾರೆ ಎಂದರೆ ಸರಿ. ನಾನು ಮರಳಕುಂಟೆ ಮತ್ತು ರಾಚೇನಹಳ್ಳಿಯ ಆಸ್ತಿಗಳ ಬಗ್ಗೆ ಹಕ್ಕು ಬಿಡುಗಡೆ ಪತ್ರಗಳನ್ನು ಬರೆದುಕೊಟ್ಟಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**